(ಚ) ರೈತರಿಗೆ ಕೃಷಿ ಪಾಸ್ ಪುಸ್ತಕ ವಿತರಣೆ ಕುರಿತು.

1.50 ಪಿಎಂ

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಚೇರ್ಮನ್‌ರವರೆ, ಕಂದಾಯ ಇಲಾಖೆಯವರು ಎರಡು ವರ್ಷಗಳ ಹಿಂದೆ ರೈತರಿಗೆ ಕೃಷಿ ಪಾಸ್ ಪುಸ್ತಕವನ್ನು ವಿತರಣೆ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಅದು ಸಾಲದ ಸಲುವಾಗಿ, ಪಹಣಿ ಪತ್ರದ ತಿದ್ದುಪಡಿಯ ಸಲುವಾಗಿ, ವರ್ಗಾವಣೆಯ ಸಲುವಾಗಿ ಎಂದು ಆಯಿತು. ಅವರು ಅನೇಕ ಕಚೇರಿಗಳಿಗೆ ತಿರುಗಾಡುವಂತಹ ಪರಿಸ್ಥಿತಿ ಬರುತ್ತದೆ, ಬ್ಯಾಂಕ್‌ಗಳಿಗೆ ಸಂಘಸಂಸ್ಥೆಗಳಿಗೆ ತಿರುಗಾಡಬೇಕೆನ್ನುವಂತಹ ಪರಿಸ್ಥಿತಿಯಾಗುತ್ತದೆ. ಇದಕ್ಕೆ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿ ಪ್ರತಿಯೊಬ್ಬ ರೈತ ಅದರ ಉಪಯೋಗ ಪಡೆಯುವಂತಹ ಹೇಳಿಕೆಯನ್ನು ಸದನದಲ್ಲಿ ಮಾನ್ಯ ಸಚಿವರು ಕೊಟ್ಟಿದ್ದಾರೆ. ಇಂತಹ ಒಂದು ಯೋಜನೆಯಿಂದ ಪ್ರತಿಯೊಬ್ಬ ರೈತರು ಸಾಲದ ಸಲುವಾಗಿ ಯಾವ ಬ್ಯಾಂಕಿಗೂ, ಯಾವ ಸಂಘಸಂಸ್ಥೆಗಳಿಗೂ ಹೋಗಬೇಕಾಗಿಲ್ಲ. ತನ್ನ ಪಹಣಿ ಪತ್ರವನ್ನು ತಿದ್ದುಪಡಿ ಮಾಡುವ ಸಲುವಾಗಿ ಯಾವ ಕಚೇರಿಗೂ ಹೋಗಬೇಕಾಗಿಲ್ಲ, ಭ್ರಷ್ಟಾಚಾರ ಆಗುವಂತಹ ಪ್ರಸಂಗ ಬರುವುದಿಲ್ಲ, ವಿಳಂಬವಾಗುವುದಿಲ್ಲ. ಇಂತಹ ಒಂದು ವಿಷಯವನ್ನು ಜಾರಿಗೆ ತಂದು ಕೃಷಿ ಪಾಸ್ ಪುಸ್ತಕವನ್ನು ವಿತರಣೆ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಎರಡು ವರ್ಷಗಳಾದರೂ ಇದುವರೆಗೂ ಇದನ್ನು ಜಾರಿಗೆ ತಂದಿಲ್ಲ. ಸರ್ಕಾರದವರು ಹೊಸ ಮಾದರಿಯ ಕೃಷಿ ಪಾಸ್ ಪುಸ್ತಕವನ್ನು ಮಾಡುತ್ತೇವೆಂದು ಹೇಳಿದಾಗ ನಾವೆಲ್ಲರೂ ಸದನದಲ್ಲಿ ಒಪ್ಪಿಕೊಂಡಿದ್ದೆವು. ಬ್ರಿಟಿಷರ ಕಾಲದಲ್ಲಿ ಅಡಳಿತದಲ್ಲಿದ್ದಂತಹ ಪದ್ಧತಿ ಎಂದರೆ ವಿಭಾಗೀಯ, ಉಪ ವಿಭಾಗೀಯ ಕಚೇರಿಗಳನ್ನು ರದ್ದು ಮಾಡುತ್ತೇವೆ, ಪ್ರತಿಯೊಬ್ಬ ರೈತರಿಗೂ ಆಡಳಿತ ವ್ಯವಸ್ಥೆಯಲ್ಲಿ ನೇರವಾಗಿ ಒದಗಿಸಿಕೊಡಬೇಕೆನ್ನುವಂತಹ ಭರವಸೆಯನ್ನು ಮಾನ್ಯ ಸಚಿವರು ಹೇಳಿದ್ದರು. ಆದರೆ ಇದು ಇದುವರೆಗೂ ಏಕೆ ಜಾರಿಗೆ ಬಂದಿಲ್ಲ. ಇದರಲ್ಲಿ ಬಂದಂತಹ ತೊಂದರೆ ಏನು, ಅದನ್ನು ಜಾರಿಗೆ ತರುತ್ತಿದ್ದಾರೆ ಎನ್ನುವಂಥಾದ್ದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆಯನ್ನು ನೀಡಬೇಕೆಂದು ತಮ್ಮ ಮೂಲಕ ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಚೇರ್ಮನ್‌ರವರೆ, ಮಾನ್ಯ ಸದಸ್ಯರು ಬಹಳ ಪ್ರಮುಖವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದಲ್ಲಿ ಯಾರು ಖಾತೆದಾರರು ಇದ್ದಾರೆ. ಅವರೆಲ್ಲರಿಗೂ ಕೃಷಿ ಪಾಸ್ ಪುಸ್ತಕವನ್ನು ವಿತರಣೆ ಮಾಡಿ ಎಲ್ಲಾ ಮಾಹಿತಿಗಳು ಒಂದೇ ಕಡೆ ಇರಬೇಕು. ಒಬ್ಬ ರೈತ ಅವನು ಲೋನ್ ತೆಗೆದುಕೊಳ್ಳಬೇಕಾದರೆ, ಅಥವಾ ಬೇರೆ ವಿಚಾರಗಳಿಗೆ ವಿವಿಧ ಇಲಾಖೆಗೆ ಅಲೆಯಬಾರದೆಂಬ ಉದ್ದೇಶದಿಂದ ನಮ್ಮ ಹಿಂದಿನ ಸರ್ಕಾರ 1986 ರಲ್ಲಿ ಒಂದು

ಕಾನೂನನ್ನು ಜಾರಿಗೆ ತಂದರು. ಇದಾದ ನಂತರ 1991 ರಲ್ಲಿ ನಿಯಮಾವಳಿ ರಚನೆಯಾಯಿತು. ಈ ನಿಯಮಾವಳಿಗಳು ರಚನೆಯಾದ ಮೇಲೆ ಕೆಲವು ಪುಸ್ತಕಗಳನ್ನು ಪ್ರಿಂಟ್ ಮಾಡಿ ಹೊರಡಿಸಿದೆವು. ಆ ಪುಸ್ತಕದಲ್ಲಿ ಸಂಪೂರ್ಣ ಮಾಹಿತಿ ಇಲ್ಲದೇ ಇರುವುದರಿಂದ ರೈತರು ಅದನ್ನು ಒಪ್ಪಲಿಲ್ಲ. ಹೀಗಾಗಿ ಈ ಯೋಜನೆ ಜಾರಿಗೆ ಬರಲಿಲ್ಲ. ಮತ್ತೆ ನಾವು ಹೊಸದಾಗಿ ಯಾವ ಯಾವ ಮಾಹಿತಿಗಳು ಅವಶ್ಯಕತೆಗಳು ರೈತರಿಗೆ ಇದೆಯೋ ಅದೆಲ್ಲವನ್ನು ಸೇರಿಸಿ ಪರಿಪೂರ್ಣವಾದ ಪುಸ್ತಕವನ್ನು ತಯಾರು ಮಾಡಿದೆವು. ಇದರಲ್ಲಿ ಆಂಧ್ರಪ್ರದೇಶದ ಹೊಸ ವಿಚಾರಗಳನ್ನು ಇದರಲ್ಲಿ ತೆಗೆದುಕೊಂಡಿದ್ದೇವೆ. ಕೇರಳ ರಾಜ್ಯದ ವಿಚಾರಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ರೈತರು ಯಾವುದೆ ಕೃಷಿ ತೊಂದರೆಗೆ ಒಳಗಾಗಬಾರದು ಎಂದು ಎಲ್ಲಾ ವಿಚಾರಗಳನ್ನು ಹೊಂದಿರುವಂತಹ ಪರಿಪೂರ್ಣವಾದ ಪುಸ್ತಕವನ್ನು ತಯಾರು ಮಾಡಿ ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ಈ ನಿಯಮಾವಳಿ ಜನವರಿ ತಿಂಗಳಲ್ಲಿ ಜಾರಿಗೆ ಬಂದಿದೆ. ಅದನ್ನು ಹೇಗೆ ಅನುಷ್ಠಾನಕ್ಕೆ ತರಬೇಕೆಂಬ ಒಂದು ಯೋಜನೆಯನ್ನು ಇಡೀ ರಾಜ್ಯಕ್ಕೆ ತಯಾರು ಮಾಡಿ ಕೊಡಲು ಮೂವತ್ತು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಹಂತಹಂತವಾಗಿ ಮಾಡಲು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಾಲ್ಕು ಜಿಲ್ಲೆಗಳಲ್ಲಿ, ನಾಲ್ಕು ವಿಭಾಗಗಳಲ್ಲಿ ಒಂದು ಜಿಲ್ಲೆ ತೆಗೆದುಕೊಂಡು ಈ ಹೊಸ ಕೃಷಿ ಪಾಸ್ ಪುಸ್ತಕವನ್ನು ವಿತರಣೆ ಮಾಡುವಂತಹ ಕೆಲಸವನ್ನು ತೆಗೆದುಕೊಂಡಿದ್ದೇವೆ. ಇದನ್ನು ತಕ್ಷಣವೇ ಪ್ರಾಯೋಗಿಕವಾಗಿ ಮಾಡುತ್ತೇವೆ. ಈ ಯೋಜನೆಗೆ 4-5 ಕೋಟಿ ರೂಪಾಯಿಗಳಾಗಬಹುದು. ಇದು ಬಹಳ ಅತ್ಯುತ್ತಮವಾದಂತಹ ಮಾಹಿತಿಗಳನ್ನು ಹೊಂದಿರುವಂತಹ ಪುಸ್ತಕವಾಗಿದೆ. ಬೇರೆ ರಾಜ್ಯಗಳವರು ಇದನ್ನು ಮೆಚ್ಚಿಕೊಂಡಿದ್ದಾರೆ. ಇದನ್ನು ನಾವು ಜಾರಿಗೆ ತರುತ್ತೇವೆ, ತಾವು ಇದರ ಬಗ್ಗೆ ಅನುಮಾನ ಪಡಬೇಕಾಗಿಲ್ಲ.

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್: ಇದು ಮಹಾರಾಷ್ಟ್ರದಲ್ಲಿ ಜಾರಿಗೆ ಬಂದು ಐದು ವರ್ಷಗಳಾಗಿವೆ. ಅವರು ಯಾವುದೇ ಬದಲಾವಣೆಗೂ, ಸಾಲಕ್ಕಾಗಿ ಬೇರೆ ಕಡೆ ಹೋಗಬೇಕಾಗಿಲ್ಲ. ಇದು ಒಂದು ಹೊಸ ಮಾದರಿ ಪಾಸ್ ಪುಸ್ತಕವಾಗಿದೆ. ಈ ವಿಚಾರವಾಗಿ ನಾನು ಮಾನ್ಯ ಸಚಿವರ ಹತ್ತಿರವೂ ಚರ್ಚೆ ಮಾಡಿದ್ದೇನೆ. ತಾವು ನೀರಾವರಿಗಾಗಿ ಎಷ್ಟೋ ಖರ್ಚು ಮಾಡುತ್ತಿದ್ದೀರಿ, ರೈತರಿಗಾಗಿ ನೀರಾವರಿಗೆಂದು ಖರ್ಚು ಮಾಡುವಂತಹ ವಿಷಯದಲ್ಲಿ ನಾವು ಈ ಪಾಸ್ ಪುಸ್ತಕಕ್ಕೆ ಮೂವತ್ತು ಕೋಟಿ ರೂಪಾಯಿಗಳನ್ನು ಖರ್ಚು ಆಗುತ್ತದೆಂಬ ವಿಷಯವನ್ನು ಎತ್ತಬಾರದು. ಇದನ್ನು ಪ್ರಾಯೋಗಿಕವಾಗಿ ಎಂದು ತೆಗೆದುಕೊಳ್ಳಬೇಡಿ. ಎಲ್ಲಾ ರಾಜ್ಯಗಳಲ್ಲೂ ಮಹಾರಾಷ್ಟ್ರದಲ್ಲಿ, ಆಂಧ್ರಪ್ರದೇಶದಲ್ಲಿ, ತಮಿಳುನಾಡಿದಲ್ಲಿ, ಅನ್ವಯವಾಗುವಂತೆ ಇದೆ. ತಾವು ನಮ್ಮ ರಾಜ್ಯದಲ್ಲಿ ಪ್ರಾಯೋಗಿಕವಾಗಿ ಎಂದು ಏಕೆ ಹೇಳುತ್ತಿದ್ದೀರಿ. ತಾವು ಇಡೀ ಕರ್ನಾಟಕ ರಾಜ್ಯಕ್ಕೆ ಒಮ್ಮಿಂದೊಮ್ಮೆಗೆ ಪಾಸ್ ಪುಸ್ತಕವನ್ನು ವಿತರಣೆ ಮಾಡಬೇಕು. ವಿಭಾಗ, ಉಪ ವಿಭಾಗ ಕಚೇರಿಗಳನ್ನು ತಕ್ಷಣವೇ ರದ್ದು ಮಾಡಬೇಕು. ಇಲ್ಲಿ

ತಹಶೀಲ್ದಾರರಿಂದ, ಉಪ ವಿಭಾಗಕ್ಕೆ, ಡಿ.ಸಿಯವರಲ್ಲಿಗೆ ಹೋಗಬೇಕೆನ್ನುವುದು ಈ ಮೂರು ಬೇಡ. ಇದು ಬ್ರಿಟಿಷರ ಆಡಳಿತ ಕಾಲದಲ್ಲಿ ಇದ್ದಂಥಾದ್ದನ್ನು ತಪ್ಪಿಸುವ ಸಲುವಾಗಿ ತಾವೇ ಹೇಳಿಕೆಯನ್ನು ಕೊಟ್ಟಿದ್ದೀರಿ. ಆದರೆ ಇದನ್ನು ತಪ್ಪಿಸುವಂತಹ ವಿಚಾರ ಇದುವರೆಗೂ ಬಂದಿಲ್ಲ. ತಾವು ಪಾಸ್ ಪುಸ್ತಕದ ವಿತರಣೆಯನ್ನು ಪ್ರಾಯೋಗಿಕವಾಗಿ ಮಾಡುವುದು ಬೇಡ. ನಾವು ಎಷ್ಟೋ ಖರ್ಚು ಮಾಡುತ್ತೇವೆ, ಇದಕ್ಕೆ ಮೂವತ್ತು ಕೋಟಿರೂಪಾಯಿಗಳು ಖರ್ಚು ಮಾಡುವ ಬಗ್ಗೆ ಏಕ್ ಲಕ್ಕ ಹಾಕುತ್ತಿದ್ದೀರಿ. ತಾವು ಈ ವಿಚಾರಕ್ಕೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಬಿ.ಸೋಮಶೇಖರ್: ಮಾನ್ಯ ಚೇರ್ಮನ್‌ರವರೆ, ಈಗ ತಕ್ಷಣಕ್ಕೆ ನಾಲ್ಕು ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಕೊಡುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದನ್ನು ಮಾಡಿದ ತಕ್ಷಣ ಎಲ್ಲಾ ಜಿಲ್ಲೆಗಳಿಂದ ವಿಸ್ತರಣೆ ಮಾಡುತ್ತೇವೆ, ಏಕೆಂದರೆ ಇದು ಪರಿಪೂರ್ಣವಾದ ಮಾಹಿತಿಯನ್ನು ಜನರು ಒಪ್ಪಿಕೊಳ್ಳುತ್ತಾರೊ. .

ಶ್ರೀ ಬಿ.ಎಸ್.ಯಡಿಯೂರಪ್ಪ: ಆ ನಾಲ್ಕು ಜಿಲ್ಲೆಗಳು ಯಾವುದು?

ಶ್ರೀ ಬಿ.ಸೋಮಶೇಖರ್: ಅದನ್ನು ಇನ್ನು ತೀರ್ಮಾನ ಮಾಡಿಲ್ಲ. ಕಂದಾಯ ಇಲಾಖೆಯ ಆಡಳಿತದಲ್ಲಿ ವಿಕೇಂದ್ರೀಕರಣವಾಗಬೇಕು. ಬ್ರಿಟೀಷರ ಕಾಲದಲ್ಲಿ ಎಷ್ಟು ಹಂತವಿತ್ತು, ಅದೇ ಹಂತಗಳನ್ನು ಆಧುನೀಕರಣವಾದ ಮೇಲೂ ಅದನ್ನೇ ಮುಂದುವರೆಸಿಕೊಂಡು ಬಂದಿದ್ದೇವೆ. ಅದು ಒಂದು ರೀತಿಯ ಪೋಸ್ಟ್ ಆಫೀಸ್ ಆಗಿದೆ ಎನ್ನುವಂಥಾದ್ದನ್ನು ನಾನು ತಾತ್ವಿಕವಾಗಿ ಒಪ್ಪುತ್ತೇನೆ. ಸುಮಾರು 5-6 ಹಂತಗಳನ್ನು ಕಡಿಮೆ ಮಾಡಿ 3 ಹಂತಕ್ಕೆ ಇಳಿಸುವಂತಹ ಚಿಂತನೆಯು ನಡೆದಿದೆ. ಇಂತಹ ಸಮಗ್ರವಾದಂತಹ ಪ್ರಸ್ತಾವನೆಯನ್ನು ತಯಾರು ಮಾಡಿದ್ದೇವೆ. ಇದರ ಬಗ್ಗೆ ಇಷ್ಟರಲ್ಲೆ ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡು ಅಧಿಕಾರ ವಿಕೇಂದ್ರೀಕರಣ ಮಾಡಿ ಮೂರು ಹಂತಗಳಲ್ಲಿ ನಾಡ ಕಚೇರಿ, ತಾಲ್ಲೂಕು ಮತ್ತು ಜಿಲ್ಲೆ, ಹಾಗೂ ರಾಜ್ಯ ಎಂದು ಮಾಡಬೇಕೆಂದು ಇದ್ದೇವೆ. ರೈತನು ಪ್ರತಿ ಆಫೀಸ್‌ಗೂ ಹೋಗಿ ಅಲೆಯುವಂಥಾದ್ದು ಇರಬಾರದು ಮತ್ತು ಬೇರೆ ಬೇರೆ ಇಲಾಖೆಗಳ ವಿಭಾಗಗಳು ಇರಬಾರದು, ಎಲ್ಲಾ ಒಂದೇ ಕಡೆ ಬರುವಂತಹದ್ದಕ್ಕೆ ಚಿಂತನೆ ಕೂಡ ನಡೆಯುತ್ತಿದೆ. ಇದನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಜ) ಹಿಪ್ಪರಗಿ ಬ್ಯಾರೇಜ್ ಕುರಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್): ಮಾನ್ಯ ಚೇರ್ಮನ್‌ರವರೆ, ನಾನು ಈಗ ಅಪೇಕ್ಷೆ ಮಾಡುವುದೇನೆಂದರೆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಅಥವಾ ಉಪಮುಖ್ಯಮಂತ್ರಿಯವರು ಇರುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ